ಆ) ೯೩ ತಾಲ್ಲೂಕುಗಳಲ್ಲಿ ಹುಲ್ಲಿನ ಬ್ಯಾಂಕಂಗಳನ್ನು ತೆರೆಯಲಾಗಿದೆ.

ಇ) ರಾಜ್ಯದಲ್ಲಿ ಅಭಾವ ಪೀಡಿತ ಪ್ರದೇಶಗಳಲ್ಲಿನ ಜಾನುವಾರುಗಳ ಸಂಖ್ಯೆ ೧,೪೨,೬೬,೪೯೧ ಗಳಿದು ೬೪ ಗೋಶಾಲೆಗಳನ್ನು ಸ್ಥಾಪಿಸಲಾಗಿದ್ದು ೨೧,೨೩೬ ಜಾನುವಾರುಗಳನ್ನು ಸಾಕಲಾಗುತ್ತಿದೆ.

ಈ) ಹೌದು.

ಉ) ಅ,ಆ ಮತ್ತು ಇ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲಿ ಈ ವಿವರಗಳನ್ನು ಕೊಡಲಾಗಿದೆ.

ಮೈಸೂರು ಜನತಾ ಬಜಾರ್

೬೧೬. ಶ್ರೀಮತಿ ಮುಂಕ್ತಾರುನ್ನಿಸಾ (ನರಸಿಂಹರಾಜ).— ಮಾನ್ಯ ಸಹಕಾರ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜನತಾ ಬಜಾರ ಲಾಭದಲ್ಲಿ ನಡೆಯುತ್ತಿದೆಯೇ ?

ಆ) ಸರ್ಕಾರವು ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘಕ್ಕೆ ಚುನಾವಣೆ ನಡೆಸುವ ಬಗ್ಗೆ ಯೋಚಿಸಿದೆಯೆ ?

ಇ) ಹಾಗಿದ್ದಲ್ಲಿ ಯಾವಾಗ ಚುನಾವಣೆಯನು ನಡೆಯುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ (ಮೈಜಿಕೆ ಸಮಾಸ)ವು ಮೈಸೂರು ನಗರದಲ್ಲಿ ಎರಡು ಜನತಾ ಬಜಾರುಗಳನ್ನು ನಡೆಸುತ್ತಿದೆ. ಈ ಎರಡು ಜನತಾ ಬಜಾರುಗಳು ಕೂಡಿಬಿದ್ದ ಹಾನಿಯನ್ನು ಹೊಂದಿವೆ.

ಆ) ಮತ್ತು ಇ) ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ(ಮೈಜಿಕೆಸಮಾಸ)ದ ವ್ಯವಹಾರಗಳನ್ನು ನಡೆಸಲು ದಿನಾಂಕ ೩೦-೧೦-೧೯೮೫ ರಿಂದ ಪರಿಣಾಮಿಸಂತೆ ಎರಡು ವರ್ಷಗಳವರೆಗೆ ವಿಶೇಷಾಧಿಕಾರಿಯನ್ನು ಸರ್ಕಾರವು ನೇಮಿಸಿದೆ. ಸಂಘದ ಕಾರ್ಯ ಚಟುವಟಿಕೆ ಉತ್ತಮಗೊಂಡ ನಂತರ ಸರ್ಕಾರವು ಸಂಘದ ಚುನಾವಣೆ ನಡೆಸುವ ಬಗ್ಗೆ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಪಟ್ಟಿಯನ್ನು ಮಂಡಿಸಲಾಯಿತು.

ವಿಫಲ ಬಾವಿ ಯೋಜನೆ ಬಗ್ಗೆ.

೬೪೭. ಶ್ರೀ ಶಿವಸಂಗಪ್ಪ ಕಡಪಟ್ಟಿ(ಹುನಗುಂದ).—ಮಾನ್ಯ ಸಹಕಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂ ಅಭಿವೃದ್ಧಿ ಬ್ಯಾಂಕಿನವರು ಕೊಳವೆ ಬಾವಿಗಳಿಗೆ ಸಾಲ ಕೊಡುವಾಗ ಭೂಗರ್ಭ ಇಲಾಖೆಯವರಿಂದ ಉತ್ಪಾದನಾ ಪರೀಕ್ಷೆ ಪ್ರಮಾಣ ಪತ್ರ ಕೇಳುವರು. ಸರ್ಕಾರದಿಂದ ಮನ್ನಣೆ ಪಡೆದ ಕಂಪನಿಯಿಂದಾ ಕೊಳವೆ ಬಾವಿ ಹಾಕಿಸಿದರೂ ಉತ್ಪಾದನೆ ಪರೀಕ್ಷೆ ಬಗ್ಗೆ ಕೇಳುವುದು ನಿಜವೇ,

ಆ) ಉತ್ಪಾದನಾ ಪರೀಕ್ಷೆ ಅವಶ್ಯಕತೆ ಇದ್ದಲ್ಲಿ ಭೂಗರ್ಭ ಇಲಾಖೆಯ ಸಿಬ್ಬಂದಿಗೆ ವಿಭಾಗ ಅಧಿಕಾರಿಗಳಿಗೆ ಅಧಿಕಾರ ಕೊಡುವ ಬದಲು ಜಿಲ್ಲೆಯ ಭೂ ಗರ್ಭ ಇಲಾಖೆಯ ಅಧಿಕಾರಿಗಳಿಗೆ ಸಾಮಗ್ರಿ ಕೊಟ್ಟು ಅಧಿಕಾರ ಕೊಟ್ಟಲ್ಲಿ ರೈತರಿಗೆ ಅನುಕೂಲವಾಗುವುದಿಲ್ಲವೇ ?